# 2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ

## ಉತ್ತರ ಕನ್ನಡ : ಕಾರವಾರ

**ಎಸ್.ಸಿ. ನಂ. 22/2021**

**ದೋ.ಸಾ. :16 ಫ್ರಾ.ಸಾ. : 13**

| | | |
|---|---|---|
| ಸಾಕ್ಷಿಯ ಹೆಸರು | : | ಮೊಹಮ್ಮದ್ ಇಮ್ತಿಯಾಜ್ ಹಮ್ಜಾ ಸಾಬ ಸಿದ್ಧುಬಡಿ |
| ತಂದೆಯ ಹೆಸರು | : | ಹಮ್ಜಾ ಸಾಬ ಸಿದ್ಧುಬಡಿ |
| ವಯಸ್ಸು | : | 23 ವರ್ಷ |
| ಕೆಲಸ | : | ಚಾಲಕ |
| ವಾಸ | : | ಹೊನ್ನಾವರ |

**ದಿನಾಂಕಃ 22-11-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಸರಕಾರಿ ಅಭಿಯೋಜಕರಿಂದಃ-**

1. ನಾನು ಜನತಾ ಕಾಲೋನಿಯಲ್ಲಿ ವಾಸಿಸುತ್ತಿದ್ದೇನೆ. 2021 ನೇ ಇಸವಿಯಲ್ಲಿ ನಾನು ಆಟೋ ಚಾಲಕ ವೃತ್ತಿ ಮಾಡುತ್ತಿದ್ದೆ. ಮೃತ ಅಬುತಾಲೀಬ್ ನನಗೆ ಗೊತ್ತು. ಚಾಸಾ-1 ಅವರ ಹೆಂಡತಿ, ಅವರಿಗೆ ಮೂವರು ಮಕ್ಕಳು, ಅವರಲ್ಲಿ ಚಾಸಾ-19 ರವರು ಮೃತನ ಮಗನಾಗಿರುತ್ತಾನೆ. ಚಾಸಾ-10 ರಿಂದ 15 ಹಾಗೂ 17 ರಿಂದ 26 ರವರು ಎಲ್ಲರೂ ನನಗೆ ಪರಿಚಿತರು. ಅವರೆಲ್ಲರೂ ಚಂದಾವರದ ಜನತಾ ಕಾಲೋನಿಯ ಹಾಗೂ ನೂರಾನಿ ಮೊಹಲ್ಲಾದ ವಾಸಿಗಳು.

2. ದಿ.03-05-2021 ರಂದು ಮಧ್ಯಾಹ್ನ 1.00 ಗಂಟೆ ಸಮಯದಲ್ಲಿ ಚಂದಾವರದ ಈದ್ಗಾ ಮೈದಾನದಲ್ಲಿ ಆಟ ಆಡುತ್ತಿದ್ದೆ. ಆ ಸಮಯದಲ್ಲಿ ಚಾಸಾ-14 ರವರ ಹಾಗೂ ಆರೋಪಿಯ ಮನೆಯ ಮುಂದಿನ ಮಣ್ಣಿನ ರಸ್ತೆಯಲ್ಲಿ ಮೃತ ಅಬುತಾಲೀಬ್ ಹಾಗೂ ಆರೋಪಿ ನಡುವೆ ಜಗಳವಾಗುತ್ತಿತ್ತು. ಆ ಶಬ್ಧ ಕೇಳಿದ ನಂತರ ನಾನು ಗಲಾಟೆ ನಡೆಯುತ್ತಿದ್ದ ಸ್ಥಳಕ್ಕೆ ಹೋದಾಗ, ಅಲ್ಲಿ ಬಹಳಷ್ಟು ಜನರು ಸೇರಿದ್ದರು ಹಾಗೂ ಚಾಸಾ-10 ರವರು ಚಾಸಾ-14 ಹೀನಾ ಕೌಸರ್ ಮನೆಯ ಕಂಪೌಂಡಿನಲ್ಲಿ ನಿಂತು ಜಗಳವನ್ನು ತಮ್ಮ ಮೊಬೈಲಿನಿಂದ ವೀಡಿಯೋ ಮಾಡುತ್ತಿದ್ದರು. ಆ ಸಮಯದಲ್ಲಿ ಮೃತ ಅಬುತಾಲಿಬ್ ರವರು ಆರೋಪಿಗೆ

ಉದ್ದೇಶಿಸಿ, "ಕೇರಿಯ ಹೆಂಗಸರಿಗೆ ಯಾಕೆ ತೊಂದರೆ ಕೊಡುತ್ತೀಯಾ ಹಾಗೂ ಅಜರುದ್ದೀನ್ ರವರ ಹೆಂಡತಿಯಾದ ಅಂಜುಂ ರವರಿಗೆ ಯಾಕೆ ಲುಂಗಿ ಎತ್ತಿ ತೋರಿಸಿ, ಅಸಭ್ಯವಾಗಿ ವರ್ತಿಸಿದೆ" ಎಂದು ಕೇಳಿದಾಗ, ಆರೋಪಿಯು ಅಬುತಾಲಿಬ್ ಗೆ ಉದ್ದೇಶಿಸಿ, "ನನ್ನನ್ನು ಕೇಳಲು ನೀನು ಯಾರು?, ರಾಂಡಕೇ ಬೇಟೆ" ಎಂದು ಬೈದು, ಬೇರೆ ಹೆಂಗಸರ ವಿಷಯ ನಿನಗೆ ಯಾಕೆ ಬೇಕು, ಎಂದು ಹೇಳಿರುತ್ತಾನೆ. ಆಗ ಅಬುತಾಲಿಬ್ ರವರು ಆರೋಪಿಗೆ, "ನೀನು ಹೀಗೆ ಮಾಡಿದರೆ, ನಿನ್ನ ವಿರುದ್ಧ ಪೊಲೀಸರಿಗೆ ದೂರು ನೀಡಿ, ಒಳಗೆ ಹಾಕಿಸುತ್ತೇನೆ" ಎಂದು ಹೇಳಿದಾಗ, ಆರೋಪಿಯು ತನ್ನ ಮನೆಗೆ ಹೋಗಿ ಒಂದು ಚಾಕುವನ್ನು ಕೈಯಲ್ಲಿ ಹಿಡಿದುಕೊಂಡು ಬಂದಿದ್ದು, ಆ ಸಮಯದಲ್ಲಿ ಚಾಸಾ-11 ಮತ್ತು 12 ರವರೂ ಸಹ ಸ್ಥಳದಲ್ಲಿದ್ದು, ಆರೋಪಿಗೆ ಜಗಳ ಮಾಡದಂತೆ ಸಮಾಧಾನಪಡಿಸಿ, ಬುದ್ಧಿವಾದ ಹೇಳುತ್ತಿದ್ದರು. ಆದರೂ ಸಹ ಆರೋಪಿಯು ಅಬುತಾಲಿಬ್ ರವರನ್ನುದ್ದೇಶಿಸಿ, "ಬೇರೆಯವರ ಹೆಂಡತಿಯ ವಿಷಯವಾಗಿ ನನ್ನ ಸುದ್ದಿಗೆ ಬಂದರೆ, ನಿನ್ನನ್ನು ಕೊಲೆ ಮಾಡಿಬಿಡುತ್ತೇನೆ" ಎಂದು ಹೇಳಿ, ತನ್ನ ಕೈಯಲ್ಲಿದ್ದ ಚಾಕುವಿನಿಂದ ತಿವಿಯಲು ಬಂದಾಗ, ಅಬುತಾಲಿಬ್ ರವರು ಅಲ್ಲಿಯೇ ಬಿದ್ದಿದ್ದ ಅಡಿಕೆ ಮರದ ದಬ್ಬೆಯನ್ನು ತೆಗೆದುಕೊಂಡು ಆರೋಪಿಯ ಕೈಯಲ್ಲಿದ್ದ ಚಾಕುವನ್ನು ಬೀಳಿಸಲು ಆತನ ಕೈಗೆ ಹೊಡೆದಾಗ, ಆರೋಪಿಯು "ನಿನ್ನನ್ನು ಕೊಲೆ ಮಾಡುತ್ತೇನೆ" ಎಂದು ಹೇಳಿ, ತನ್ನ ಕೈಯಲ್ಲಿದ್ದ ಚಾಕುವಿನಿಂದ ಅಬುತಾಲಿಬ್ ರವರ ಎದೆಗೆ ಚುಚ್ಚಿದ್ದು, ಅವರ ಎದೆಯಿಂದ ರಕ್ತ ಬಂದಿರುತ್ತದೆ ಹಾಗೂ ಅಬುತಾಲಿಬ್ ರವರು ಕೆಳಗೆ ಬಿದ್ದಿರುತ್ತಾರೆ, ನಂತರ ಆರೋಪಿಯು ತನ್ನ ಕೈಯಲ್ಲಿ ಚಾಕುವನ್ನು ಮೇಲೆ ಒಮ್ಮೆ ತೋರಿಸಿ, ಅದನ್ನು ತನ್ನ ಕೈಯಲ್ಲಿ ಹಿಡಿದುಕೊಂಡು ಅಲ್ಲಿಂದ ಹೋಗಿರುತ್ತಾನೆ. ಆಗ ಸಮಯ ಮಧ್ಯಾಹ್ನ 1.15 ಗಂಟೆಯಾಗಿತ್ತು.

3. ಸ್ಥಳದಲ್ಲಿದ್ದ ನಾವುಗಳೆಲ್ಲಾ ಸೇರಿ, ಅಬುತಾಲಿಬ್ ರವರಿಗೆ ಉಪಚರಿಸಿದ್ದು, ಅಬುಲಾಲೀಬ್ ರವರನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗಲು, ನಾನು ನನ್ನ ಆಟೋವನ್ನು ಈದ್ಗಾ ಮೈದಾನದಿಂದ ಘಟನೆಯಾದ ಸ್ಥಳಕ್ಕೆ ತಂದಿರುತ್ತೇನೆ. ಆನಂತರ ಅಬುತಾಲೀಬ್ ರವರ ಹೆಂಡತಿಯಾದ ಚಾಸಾ-1, ಅವರ ಮಗ ಚಾಸಾ-19 ಮತ್ತು ಚಾಸಾ-13 ಹೀನಾ ಕೌಸರ್ ಹಾಗೂ ನಾನು ಸೇರಿ, ಅಬುತಾಲಿಬ್ ರವರನ್ನು ನನ್ನ ಆಟೋದಲ್ಲಿ ಕುಮಟಾದ ಸರಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತೇವೆ. ಅಲ್ಲಿ 1.50 ಸುಮಾರಿಗೆ ವೈದ್ಯರು ಅಬುತಾಲಿಬ್ ರವರು ಮೃತಪಟ್ಟಿರುತ್ತಾರೆ ಎಂದು ತಿಳಿಸಿರುತ್ತಾರೆ. ಈ ವಿಷಯವನ್ನು ತಿಳಿದು, ಚಾಸಾ-1

ರವರು ಸ್ವಲ್ಪ ಕಾಲ ಮೂರ್ಛೆ ಹೋಗಿದ್ದರು. ಆ ಸಮಯಕ್ಕೆ ಗಲಾಟೆ ನಡೆದ ಸ್ಥಳದಲ್ಲಿದ್ದ ಕೆಲವರು ಆಸ್ಪತ್ರೆಗೆ ಬಂದಿದ್ದರು.

4. ನಂತರ ಚಾಸಾ–10 ರವರು ತಮ್ಮ ಮೊಬೈಲಿನಲ್ಲಿ ವೀಡಿಯೋ ಮಾಡಿದ್ದ ಘಟನೆಯ ದೃಶ್ಯವನ್ನು ದಿ. 05–05–2021 ರಂದು ನಾನು ನೋಡಿರುತ್ತೇನೆ. ಈ ಘಟನೆ ನಡೆದ ದಿನದಂದು ಚಾಸಾ–15 ಅಂಜುಂ ರವರು ಬಟ್ಟೆ ತೊಳೆಯಲು ಚಾಸಾ–14 ರವರ ಮನೆಗೆ ಹೋಗಿ, ಮನೆಯ ಕಂಪೌಂಡಿನಲ್ಲಿ ಬಟ್ಟೆ ತೊಳೆಯುತ್ತಿದ್ದಾಗ, ಪಕ್ಕದ ಮನೆಯ ಆರೋಪಿಯು ಚಾಸಾ–15 ರವರಿಗೆ ತನ್ನ ಲುಂಗಿಯನ್ನು ಎತ್ತಿ ತೋರಿಸಿ, ಅಸಭ್ಯವಾಗಿ ವರ್ತಿಸಿರುತ್ತಾನೆ. ಈ ವಿಷಯವನ್ನು ಚಾಸಾ–15 ರವರು ತನ್ನ ಗಂಡ ಚಾಸಾ–10 ರವರಿಗೆ ತಿಳಿಸಿದ್ದು, ಆನಂತರ ಅವರಿಬ್ಬರು ಅಬುತಾಲಿಬ್ ರವರ ಮನೆಗೆ ಹೋಗಿ, ಆರೋಪಿ ಮಾಡಿದ ಕೃತ್ಯದ ಬಗ್ಗೆ ತಿಳಿಸಿದ್ದು, ಆನಂತರ ಅಬುತಾಲೀಬ್ ರವರು ಆರೋಪಿಯನ್ನು ಕೇಳಲು ಚಾಸಾ–14 ರವರ ಮನೆಯ ಮುಂದಿನ ರಸ್ತೆಗೆ ಬಂದಾಗ ಎದುರಿಗೆ ಆರೋಪಿಯು ಬಂದಿದ್ದು ಅಬುತಾಲಿಬ್ ರವರು ಆರೋಪಿಗೆ ಬುದ್ಧಿವಾದ ಹೇಳಿರುತ್ತಾರೆ ಹಾಗೂ ಈ ಹಿಂದೆಯೂ ಸಹ ಬಹಳಷ್ಟು ಬಾರಿ ಬುದ್ಧಿವಾದ ಹೇಳಿದ್ದರಿಂದ ಆರೋಪಿಯು ಅಬುತಾಲಿಬ್ ರವರ ಮೇಲೆ ಸಿಟ್ಟಿನಿಂದ ಇದ್ದು, ಕೊಲೆ ಮಾಡುವ ಉದ್ದೇಶದಿಂದ ತನ್ನ ಮನೆಯಿಂದ ಚಾಕುವನ್ನು ತಂದು ಅಬುತಾಲಿಬ್ ರವರ ಎದೆಗೆ ಚುಚ್ಚಿ ಕೊಲೆ ಮಾಡಿರುತ್ತಾನೆ. ಈ ಬಗ್ಗೆ ಚಾಸಾ–1 ರವರು ದೂರು ನೀಡಿರುತ್ತಾರೆ. ಹಾಗೂ ನಾನೂ ಸಹ ಹೇಳಿಕೆಯನ್ನು ನೀಡಿರುತ್ತೇನೆ. ನಿಪಿ–11 ಮತ್ತು 12 ಫೋಟೊಗಳಲ್ಲಿ ಮೃತ ಅಬುಲಾಲೀಬ್ ರವರ ಮೃತ ದೇಹವನ್ನು ನೋಡಿ ಗುರುತಿಸಿರುತ್ತಾರೆ. ಈಗ ನ್ಯಾಯಾಲಯದ ಮುಂದಿರುವ ಎಂ.ಓ–7 ಅಡಿಕೆ ಮರದ ದಬ್ಬೆ, ಎಂ.ಓ–2 ಚಾಕುವನ್ನು ಸಾಕ್ಷಿಯು ನೋಡಿ ಗುರುತಿಸಿರುತ್ತಾರೆ. ಘಟನಾ ದಿನದಂದು ಮೃತ ಅಬುತಾಲೀಬ್ ರವರು ಧರಿಸಿದ್ದ ಪಿಂಕ್ ಶರ್ಟ್ ಎಂ.ಓ–9, ಪಿಂಕ್ ಲುಂಗಿ ಎಂ.ಓ–8, ಪಿಂಕ್ ಬಣ್ಣದ ನಿಕ್ಕರ್ ಎಂ.ಓ–10 ಹಾಗೂ ಅವರ ಕನ್ನಡಕ ಎಂ.ಓ–5 ಮತ್ತು ಚಪ್ಪಲಿ ಎಂ.ಓ–6, ಆರೋಪಿ ಧರಿಸಿದ್ದ ನೀಲಿ ಬಣ್ಣದ ಶರ್ಟ್ ಎಂ.ಓ–1, ಬಿಳಿ ಕಪ್ಪು ಬಣ್ಣದ ಚೌಕಾಕಾರದ ಲುಂಗಿ ಎಂ.ಓ–3 ಇವುಗಳನ್ನು ಸಾಕ್ಷಿಯು ನೋಡಿ ಗುರುತಿಸಿರುತ್ತಾರೆ. ಸಾಕ್ಷಿಯು ಚಾಸಾ–10 ರವರ ಮೊಬೈಲನ್ನು ನೋಡಿ ಗುರುತಿಸಿದ್ದು, ಅದನ್ನು ಎಂ.ಓ–11 ಎಂದು ಗುರುತಿಸಲಾಗಿದೆ. ಸದರಿ ಮೊಬೈಲಿನಲ್ಲಿದ್ದ ಘಟನೆಗೆ ಸಂಬಂಧಿಸಿದ ವೀಡಿಯೋವನ್ನು ಸಾಕ್ಷಿಯು ನೋಡಿ ಗುರುತಿಸಿರುತ್ತಾರೆ.

**ಪಾಟೀ ಸವಾಲುಃ ಆರೋಪಿ ಪರ ಸಿ.ಎಲ್.ಎ.ಡಿ.ಸಿ. ರವರಿಂದಃ–**

ಆರೋಪಿ ಪರ ವಕೀಲರು ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದು, ಪ್ರಕರಣವನ್ನು ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮೂಲಕ ಬೆರಳಚ್ಚು ಮಾಡಿಸಲಾಗಿದೆ.)

ಓ.ಹೇ.ಕೇ.ಸ.ಇ.
Sd/-
(ಮಾಯಣ್ಣ ಬಿ.ಎಲ್.)
2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉತ್ತರಕನ್ನಡ, ಕಾರವಾರ